# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ ಇ(2)152/2021-22

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ"
ಬೆಂಗಳೂರು, ದಿನಾಂಕ:27-09-2021.

## ಪತ್ರಿಕಾ ಪ್ರಕಟಣೆ

ವಿಷಯ: ಆಯೋಗವು 2019ನೇ ಸಾಲಿನ ಸಹಾಯಕ/ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯ್ತಿ ಕೋರಿರದ ಅಭ್ಯರ್ಥಿಗಳಿಗೆ **ದಿನಾಂಕ:08-10-2021(ಶುಕ್ರವಾರ)ರಂದು** ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ನಡೆಸುವ ಬಗ್ಗೆ.

*********

ಆಯೋಗವು 2019ನೇ ಸಾಲಿನ ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮತ್ತು ಕರ್ನಾಟಕ ಭವನ ದೆಹಲಿಯ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ ಸಹಾಯಕ/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ: 24-07-2021ರ ಪರಿಷ್ಕೃತ ತಿದ್ದುಪಡಿ ಅಧಿಸೂಚನೆಯಲ್ಲಿ ಮತ್ತು ದಿನಾಂಕ: 09-09-2021ರಂದು ಪ್ರಕಟಿಸಲಾದ ಅರ್ಹತಾ ಪಟ್ಟಿಯಲ್ಲಿ ತಿಳಿಸಿರುವಂತೆ, ಕಡ್ಡಾಯ ಕನ್ನಡಭಾಷಾ ಪರೀಕ್ಷೆಯಿಂದ ವಿನಾಯ್ತಿ ಪಡೆಯದ ಅಭ್ಯರ್ಥಿಗಳ ಹೆಸರು, ನೋಂದಣಿ ಸಂಖ್ಯೆ ಮುಂದೆ "***" ಎಂದು ನಮೂದಿಸಿದ್ದು, ಸದರಿ ಅಭ್ಯರ್ಥಿಗಳಿಗೆ **ದಿನಾಂಕ:08-10-2021(ಶುಕ್ರವಾರ)ರಂದು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಬೆಂಗಳೂರು ಮತ್ತು ಬೆಳಗಾವಿ ಜಿಲ್ಲೆಯ ಪರೀಕ್ಷಾ ಉಪ ಕೇಂದ್ರಗಳಲ್ಲಿ ನಡೆಸಲು ಉದ್ದೇಶಿಸಿದೆ** ಮತ್ತು ಸದ್ಯದಲ್ಲಿಯೇ ಅಂತಹ ಅಭ್ಯರ್ಥಿಗಳಿಗೆ ಪ್ರವೇಶ ಪತ್ರವನ್ನು Download ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದೆಂಬ ಅಂಶವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ತಿಳಿಸಿದೆ.

ಮುಂದುವರೆದು, ಮೇಲೆ ವಿವರಿಸಿರುವಂತೆ ಮತ್ತು ದಿನಾಂಕ: 09-09-2021ರ ಅರ್ಹತಾ ಪಟ್ಟಿಯಲ್ಲಿ ತಿಳಿಸಿರುವಂತೆ, ಪ್ರಸ್ತುತ ದಿನಾಂಕ: 08-10-2021ರಂದು ನಡೆಯಲಿರುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಬರೆಯಬೇಕಾಗಿರುವ ಅಭ್ಯರ್ಥಿಗಳ ಅರ್ಹತೆಯು ಸದರಿ ಪರೀಕ್ಷೆಯ ಫಲಿತಾಂಶಕ್ಕೆ ಒಳಪಟ್ಟಿರುವುದರಿಂದ ಮತ್ತು ಅದರ ಫಲಿತಾಂಶದ ನಂತರವೇ ಮೂಲದಾಖಲೆಗಳ ಪರಿಶೀಲನೆಯ ಕಾರ್ಯವನ್ನು ನಡೆಸಲಾಗುವುದರಿಂದ, ಅಂತಹ ಅಭ್ಯರ್ಥಿಗಳು ಕಡ್ಡಾಯವಾಗಿ ದಿನಾಂಕ: 08-10-2021ರಂದು ನಡೆಯುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗುವಂತೆ ಈ ಮೂಲಕ ತಿಳಿಸಿದೆ.

ತಾವು ಇದನ್ನು SR WORLD ಟೆಲಿಗ್ರಾಂ ಗ್ರೂಪ್ ನಿಂದ ಪಡೆದಿರುವಿರಿ.
ಈಗಾಗಲೇ ಆ ಗ್ರೂಪ್ ನಲ್ಲಿ 2,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿದ್ದಾರೆ.
ನೀವೂ JOIN ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್/ಟೆಲಿಗ್ರಾಂ ಮಾಡಿ.

(ಜಿ.ಸತ್ಯವತಿ)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.